

ಪ್ರಸ್ತುತಪಡಿಸಲು, ಆ ಭಾವದ ಆಳಕ್ಕೆ ಹೋಗಿ ಸಂಪೂರ್ಣವಾದ ಪ್ರಯತ್ನವನ್ನು ಮಾಡುತ್ತೀರಿ. ಹೀಗೆ ನೀವು ಪ್ರಸ್ತುತಪಡಿಸುವಾಗ ಅಂತಿಮವಾಗಿ, ನಿಮ್ಮನ್ನೇ ನೀವು ಮರೆತುಬಿಡಬಹುದು. ಆಗ ನಿಮಗೆ ದೊರೆಯುವುದು 'ಆನಂದ'ದ ಸ್ಥಿತಿ. ಆ ಆನಂದವನ್ನು ಕಂಡುಕೊಳ್ಳುವ ವೇಳೆಗೆ ಅದನ್ನು ಪ್ರಸ್ತುತಪಡಿಸುವ ಕಲಾವಿದ ತಾನು ಸಾಗಿದ ದಾರಿಯನ್ನೇ ಮರೆತಿರುತ್ತಾನೆ. ಅಂದರೆ ಇದು ಭಯಾನಕ ರಸ ಎಂಬ ಅರಿವನ್ನೇ ಮರೆತಿರುತ್ತಾನೆ. ಬಂದಿಷ್, ರಾಗ, ತಾಳ... ಮತ್ತೇನೇ ಆಗಲಿ, ಅವನ ನೆನಪಿನಲ್ಲಿ ಉಳಿಯುವುದೇ ಇಲ್ಲ. ಕೇವಲ ಆನಂದದ ಸ್ಥಿತಿಯೊಂದೇ ಮನದಲ್ಲಿ ಉಳಿದಿರುತ್ತದೆ. ಆ ಕ್ಷಣವೊಂದು ಆತನ ನೆನಪಿನಲ್ಲಿ ಅಚ್ಚಳಿಯದೇ ಉಳಿಯುತ್ತದೆ. ಅದೇ ಬೆಳಕು. ನಲವತ್ತು ಐವತ್ತು ವರ್ಷಗಳ ಬಳಿಕವೂ ಆ ಬೆಳಕಿನ ನೆನಪು ಅವನಲ್ಲಿ ಉಳಿಯುತ್ತದೆ. ಕಲೆಯೆಂದರೆ, ಅದು ನಮ್ಮನ್ನು ಆನಂದದ ಕ್ಷಣಕ್ಕೆ ಕೊಂಡೊಯ್ಯುವ, ಪರಿವರ್ತಿಸುವ ಮಾಧ್ಯಮವಾಗಿದೆ.

ಡಿಜಿಟಲ್ ಮಾಧ್ಯಮದ ಮೂಲಕ ಕಲಾಸ್ವಾದನೆ ಮಾಡುವಾಗ ಈ ಪರಿವರ್ತನೆಯ ಕ್ರಿಯೆಗೆ ಅವಕಾಶವಿಲ್ಲ. ಅನುಭೂತಿಯನ್ನು ಪಡೆಯುವುದಕ್ಕೆ ಭಾವನಾತ್ಮಕ ಕ್ಷಣಗಳು ಅತೀ ಅಗತ್ಯ. ಅತ್ಯುತ್ತಮವಾದ ಸಂಗೀತ ಉಪಕರಣವಿದೆಯೆಂದ ಮಾತ್ರಕ್ಕೆ ನೈಜ ಸಂಗೀತ ಕಛೇರಿಯ ಅನುಭೂತಿ ದೊರೆಯುವುದೇ? ನಿಜವಾದ ತಾಜಾ ಹೂವಿನ ಕಂಪಿದ್ದಂತೆ ಈ ಅನುಭೂತಿ. ಡಿಜಿಟಲ್ ಮಾಧ್ಯಮ ಅದನ್ನು ಕೊಡುವುದಿಲ್ಲ ಎಂದು ನನಗೆ ಅನಿಸುತ್ತದೆ. ಹೊಸತಲೆಮಾರಿನವರು ಕೂಡ ಈ ಅನುಭೂತಿಯನ್ನು ಹುಡುಕಿಕೊಂಡು ಬಂದೇ ಬರುತ್ತಾರೆ.

◆ **ನೀವು ಸಂಗೀತಕ್ಕೆ ಸಂಬಂಧಿಸಿದ ಪುಸ್ತಕಗಳನ್ನು ಬರೆದಿದ್ದೀರಿ. ಬಂದಿಷ್‌ಗಳನ್ನು ರಚಿಸಿದ್ದೀರಿ. ಆ ಅನುಭವಗಳ ಕುರಿತು ಹೇಳಿ.**

ನನ್ನ ಬಂದಿಷ್‌ಗಳು ಪ್ರಜ್ಞಾಪೂರ್ವಕವಾಗಿ ಕುಳಿತು ಬರೆದವಲ್ಲ. ಯಾವುದೋ ಕ್ಷಣಗಳಲ್ಲಿ ಅವುಗಳು ಬಂದಾಗ ನಾನು ನನ್ನ ಬೊಗಸೆಯಲ್ಲಿ ಹಿಡಿಯುವ ಪ್ರಯತ್ನ ಮಾಡಿದ್ದೇನೆ. ಈ ಪ್ರಕ್ರಿಯೆಯೂ ಬೇರೆಯದೇ ಆದ ಅನುಭವಗಳನ್ನು ನನಗೆ ಕೊಟ್ಟಿದೆ. ಉದಾಹರಣೆಗೆ, ನಾನು ರಾಗ 'ನಂದಧ್ವನಿ'ಯನ್ನು ಸಂಯೋಜಿಸಿದ ಒಂದು ಸನ್ನಿವೇಶವನ್ನು ನಿಮ್ಮೊಡನೆ ಹಂಚಿಕೊಳ್ಳುತ್ತೇನೆ. ಒಮ್ಮೆ ಸಂಗೀತ ಕಛೇರಿಯಲ್ಲಿ ನಾನು ನಂದ ರಾಗವನ್ನು ಹಾಡಿದೆ. ಅದಾದ ಬಳಿಕ ಹಂಸಧ್ವನಿಯನ್ನು ಹಾಡುವಂತೆ ಶ್ರೋತೃವೊಬ್ಬರು ವಿನಂತಿಸಿದರು. ಆದರೆ, ಅವೆರಡೂ ರಾಗಗಳ ನಡುವೆ ಸಾಮ್ಯತೆ ಇದ್ದುದರಿಂದ, 'ಹಂಸಧ್ವನಿ ಈಗಲೇ